KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:            ದಿನಾಂಕ : DATE 23/3/2020

# ರಾಷ್ಟ್ರಪತಿಗಳಿಗೂ ಕರೋನಾ ಭೀತಿ



- ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೂ ಕರೋನಾ ಭೀತಿ
- ರಾಷ್ಟ್ರಪತಿ ಭವನದ ಉಪಹಾರ ಕೂಟ ದಲ್ಲಿ ಭಾಗವಹಿಸಿದ್ದ ದುಷ್ಯಂತ್ ಸಿಂಗ್
- ರಾಷ್ಟ್ರಪತಿ ಭವನದ ದೈನಂದಿನ, ನಿಗದಿತ ಕಾರ್ಯಕ್ರಮಗಳು ರದ್ದು

**ದಿಲ್ಲಿ:** ಕರೋನಾ ವೈರಸ್ ಆತಂಕ ಈಗ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೂ ಕಾಡಿದ್ದು, ಕೋವಿಡ್ - 19 ಪರೀಕ್ಷೆಗೆ ಒಳಗಾಗುತ್ತಾರೆ ಎಂದು ರಾಷ್ಟ್ರಪತಿ ಭವನದ ಮೂಲಗಳು ತಿಳಿಸಿದ್ದು, ರಾಷ್ಟ್ರಪತಿ ಗಳ ಎಲ್ಲ ದೈನಂದಿನ ನಿಗದಿತ ಕಾರ್ಯಕ್ರಮಗಳನ್ನು ಮುಂದೂಡಲಾಗಿದೆ ಎನ್ನಲಾಗಿದೆ.

ಮಾರ್ಚ್ 18ರಂದು ಉತ್ತರ ಪ್ರದೇಶ ಹಾಗು ರಾಜಸ್ಥಾನ ಸಂಸದರಿಗೆ ರಾಷ್ಟ್ರಪತಿ ಭವನದಲ್ಲಿ ಆಯೋಜಿಸಿದ್ದ ಉಪಹಾರ ಕೂಟದಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಕೂಡ ಭಾಗವಹಿಸಿದ್ದು, ರಾಷ್ಟ್ರಪತಿಗಳಿಗೆ ಕರೋನಾ ಆತಂಕ ಕಾಡಲು ಕಾರಣವಾಗಿದೆ. ಈ ಉಪಹಾರ ಕೂಟದಲ್ಲಿ ರಾಜಸ್ಥಾನದ ಬಿಜೆಪಿ ಸಂಸದ ದುಷ್ಯಂತ್ ಸಿಂಗ್ ಕೂಡ ಭಾಗಿಯಾಗಿದ್ದರು. ಉಪಹಾರ ಕೂಟದ ಕೆಲವು ದಿನಗಳ ಹಿಂದೆ ಸಂಸದ ದುಷ್ಯಂತ್ ಸಿಂಗ್ ಕರೋನಾ ಸೋಂಕು ದೃಢಪಟ್ಟಿರುವ ಗಾಯಕಿ ಕನಿಕಾ ಕಪೂರ್ ಜೊತೆ ಪಾರ್ಟಿಗೆ ಹೋಗಿದ್ದರು. ಅದಾದ ನಂತರ ಮಾರ್ಚ್ 18ರಂದು ರಾಷ್ಟ್ರಪತಿ ಭವನದಲ್ಲಿ ನಡೆದ ಉಪಹಾರ ಕೂಟದಲ್ಲಿ . ಭಾಗವಹಿಸಿದ್ದ ದುಷ್ಯಂತ್ ಸಿಂಗ್, ಶುಕ್ರವಾರ ಸ್ವಯಂ ನಿರ್ಬಂಧ ವಿಧಿಸಿಕೊಂಡಿರುವುದಾಗಿ ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳು ಮುನ್ನೆಚ್ಚರಿಕಾ ಕ್ರಮವಾಗಿ ಕೋವಿಡ್-19 ಪರೀಕ್ಷೆಗೆ ಒಳಪಡಲಿದ್ದಾರೆ ಎನ್ನಲಾಗಿದೆ.

ಇನ್ನು, ಸಂಸದ ದುಷ್ಯಂತ್ ಸಿಂಗ್ ಜೊತೆ ಅವರ ತಾಯಿ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ ಕೂಡ ಕನಿಕಾ ಕಪೂರ್ ಜೊತೆ ಪಾರ್ಟಿಯಲ್ಲಿ ಕಾಣಿಸಿಕೊಂಡಿದ್ದರು. ಅವರನ್ನು ಕೂಡ ಹೋಮ್ ಐಸೊಲೇಷನ್‌ನಲ್ಲಿ ಇಡಲಾಗಿದೆ. ದುಷ್ಯಂತ್ ಸಿಂಗ್ ಸ್ವಯಂ ನಿರ್ಬಂಧ ವಿಧಿಸಿಕೊಂಡಿರುವುದು ಗೊತ್ತಾದ ತಕ್ಷಣ ಟಿಎಂಸಿಯ ಡೆರೆಕ್ ಒಬ್ರೈಯನ್, ಅಪ್ನಾ ದಳದ ಅನುಪ್ರಿಯಾ ಪಟೇಲ್ ಸೇರಿ ಹಲವರು ಸ್ವಯಂ ನಿರ್ಬಂಧ ವಿಧಿಸಿಕೊಂಡಿದ್ದಾರೆ. ಇನ್ನು ಕನಿಕಾ ಕಪೂರ್ ಪಾರ್ಟಿಯಲ್ಲಿ ಉತ್ತರ ಪ್ರದೇಶದ ಆರೋಗ್ಯ ಸಚಿವ ಜೈ ಸಿಂಗ್ ಕೂಡ ಇದ್ದರು ಎಂಬುದು ತಿಳಿದುಬಂದಿದೆ. ಮಾರ್ಚ್ 18ರ ಸಂಸದರ ಉಪಹಾರ ಕೂಟಕ್ಕೆ ಎಲ್ಲ ಸಂಸದರನ್ನು ಥರ್ಮಲ್ ಚೆಕ್‌ಅಪ್ ಮಾಡಿಯೇ ರಾಷ್ಟ್ರಪತಿ ಭವನದ ಒಳಗಡೆ ಬಿಡಲಾಗಿದೆ ಎಂದು ರಾಷ್ಟ್ರಪತಿ ಭವನದ ಮೂಲಗಳು ತಿಳಿಸಿವೆ.